21

# ಆದಿ ಸಭೆಯು ಅಷ್ಟು ಧಾರಾಳವಾಗಿ ಯಾಕೆ ಕೊಟ್ಟಿತು

ಆದಿ ಸಭೆಯನ್ನು ನಾವು ದೃಷ್ಟಿಸಿ ನೋಡುವಾಗ, ನಮ್ಮ ಮೇಲೆ ಬಹಳವಾಗಿ ಪ್ರಭಾವ ಬೀರುವ ಹಲವಾರು ಗುಣಲಕ್ಷಣಗಳನ್ನು ಕಂಡುಕೊಳ್ಳುತ್ತೇವೆ. ಅವರ ಆಸಕ್ತಿ ಮತ್ತು ಅವರ ತ್ವರಿತ ಬೆಳವಣಿಗೆ, ತಮ್ಮ ಒಡೆಯನಿಗೆ ನಿಷ್ಠೆ, ಅಪೊಸ್ತಲರ ಬೋಧನೆಗೆ ದೃಢವಾದ ಅನುಸರಿಸುವಿಕೆ ಮತ್ತು ಇತರ ಅನೇಕ ಲಕ್ಷಣಗಳಿಂದ ನಾವು ಪ್ರಭಾವಿತರಾಗುತ್ತೇವೆ.

ಬಹಳವಾಗಿ ಮೆಚ್ಚತಕ್ಕ ಅವರ ಗುಣಲಕ್ಷಣಗಳಲ್ಲಿ ಒಂದು ಅವರಿಗೆ ಭೌತಿಕ ಸೊತ್ತುಗಳೊಂದಿಗೆ ಇದ್ದ ಉದಾರತೆ. ಅವರ ಕೊಡುವಿಕೆಯು ಬಲತ್ಕಾರದಿಂದಾಗಿರಲಿಲ್ಲ. ಯಾವ ರೀತಿಯ ಒತ್ತಾಯವನ್ನೂ ಅವರ ಮೇಲೆ ಹೇರಲಿಲ್ಲ. ಅವರ ಮೇಲೆ ಸುಂಕವಿರಲಿಲ್ಲ. ಜನರಿಗೆ ಕಾಣಬೇಕೆಂದು ಅವರು ಕೊಡಲಿಲ್ಲ. ಅವರ ಕೊಡುವಿಕೆಯಲ್ಲಿ ಯಾವುದೇ ಸ್ವಾರ್ಥದ ಉದ್ದೇಶಗಳಿರಲಿಲ್ಲ, ಯಾಕಂದರೆ ಅದರ ಉದಾರಹಣೆಯು ಪ್ರೇರಿತ ಬರಹಗಳಿಂದ ಯಥಾರ್ಥವಾದ ಮಾತುಗಳಲ್ಲಿ ಮೆಚ್ಚಿಕೊಳ್ಳಲ್ಪಟ್ಟಿದೆ. ಯೆರೂಸಲೇಮಿನಲ್ಲಿದ್ದ ಕ್ರೈಸ್ತರು ತಮ್ಮ ಆಸ್ತಿಗಳನ್ನು ಮಾರಿ, ಅಗತ್ಯವಿರುವವರೊಂದಿಗೆ ಹಂಚಿಕೊಳ್ಳಲು ತಮ್ಮ ಹಣವನ್ನು ತಂದಿಟ್ಟರು (ಅಪೊಸ್ತಲರ ಕೃತ್ಯ 4:34, 35). ಅನಂತರದಲ್ಲಿ ಪೌಲನು ಫಿಲಿಪ್ಪಿಯವರ ಮತ್ತು ಮಕೆದೋನ್ಯದಲ್ಲಿಯ ಇತರರಲ್ಲಿಯ ಉದಾರತೆಯ ಬಗ್ಗೆ ಹೊಗಳಿಕೆಯ ಮಾತುಗಳಿಂದ ಹೇಳಿದನು (ಫಿಲಿಪ್ಪಿ 4:14, 15; 2 ಕೊರಿಂಥ 8:1-4). ಮೊದಲನೆಯ ಶತಮಾನದ ಕ್ರೈಸ್ತರ ಉದಾರತೆಯ ಬಗ್ಗೆ ಸಂಶಯವೇ ಇರಲಿಲ್ಲ.

ಈ ಕೊಡುವಿಕೆಯು ಇತರರೊಂದಿಗೆ ಸುವಾರ್ತೆಯನ್ನು ಹಂಚಿಕೊಳ್ಳುವದರಲ್ಲಿ ಅವರ ಅಪಾರ ಯಶಸ್ಸಿಗೆ ಒಂದು ಕಾರಣವಾಗಿತ್ತು. ಲೋಕಕ್ಕೆ ಸುವಾರ್ತೆ ಸಾರುವುದು ಮತ್ತು ಕೊರತೆಯುಳ್ಳ ದೇವಜನರ ಪೋಷಣೆ ಮಾಡುವುದು ಉದಾರ ಕೊಡುಗೆಗಾಗಿ ಕರೆಯಲ್ಪಟ್ಟ ಕೆಲಸಗಳಾಗಿದ್ದವು. ಕ್ರೈಸ್ತರ ಧಾರಾಳವಾದ ಸಹಾಯವು ಈ ಕಾರ್ಯಗಳನ್ನು ಸಾಧ್ಯವಾಗಿ ಮಾಡಿತು.

ತಮ್ಮ ಕೊಡುವಿಕೆಯಲ್ಲಿ ಅವರು ಯಾಕೆ ಅಷ್ಟು ಉದಾರಿಗಳಾಗಿದ್ದರು? ಕೊಡಲು ಶಕ್ತರಾಗುವಂತೆ ಜನರು ಯಾಕೆ ತಮ್ಮ ಆಸ್ತಿಪಾಸ್ತಿಗಳನ್ನು ಮಾರಲು ಸಿದ್ಧರಾಗಿದ್ದರು? ಮೊದಲನೆಯ ಶತಮಾನದ ಉದಾರತೆಗಾಗಿರುವ ಕಾರಣಗಳ ಅಧ್ಯಯನವು ಈ ಶತಮಾನದಲ್ಲಿಯ ಸಭೆಯು ಮಾಡಬೇಕಾಗಿದ್ದಕ್ಕಿಂತ ಹೆಚ್ಚು ಉದಾರವಾಗಿ ಕೊಡುವದಿಲ್ಲ ಎಂಬುದನ್ನು ನಿರ್ಧರಿಸಲು ನಮಗೆ ಸಹಾಯ ಮಾಡುವುದು.

## ಅವರು ತಮ್ಮನ್ನೇ ಕೊಟ್ಟರು

ಅದರ ಕೊಡುವಿಕೆಗೆ ಒಂದು ಬೀಗದ ಕೈ 2 ಕೊರಿಂಥ 8:5ರಲ್ಲಿ ಕಂಡು ಬರುತ್ತದೆ: "... ಅವರು ತಮ್ಮನ್ನೇ ಕರ್ತನಿಗೆ ಕೊಟ್ಟರು ..." ಅವರು ಯಥಾರ್ಥ ವಾಗಿ ಮಾರ್ಪಾಟು ಹೊಂದಿದ್ದರು. ಮಾರ್ಪಡುವುದು ಅಂದರೆ ಒಬ್ಬನಾಗಿರುವದನ್ನು ಮತ್ತು ಒಬ್ಬನಿಗಿರುವದನ್ನು ಎಲ್ಲವನ್ನೂ ಕೊಡುವದೆಂದು ಅರ್ಥ ಎಂಬುದನ್ನು ಅರಿತುಕೊಂಡಿದ್ದರು. ಇವರು ಹೆಸರಿಗೆ ಮಾತ್ರ ಸಭೆಯ ಸದಸ್ಯರಾಗಿರಲಿಲ್ಲ. ಅದು ಅವರ ವೈಯಕ್ತಿಕ ನಂಬಿಕೆಯ ಮೇಲಿನ ವಿಷಯವಾಗಿತ್ತು. ಅವರ ಮನೋಭಾವನೆಯು, "ಇಲ್ಲಿ, ಕರ್ತನೇ, ನನ್ನನ್ನೇ ನಿನಗೆ ಕೊಡುವೆನು" ಎಂಬುದಾಗಿತ್ತು, ಒಬ್ಬನು ಯಥಾರ್ಥವಾಗಿ ಕರ್ತನಿಗೆ ಒಪ್ಪಿಸಿಕೊಟ್ಟಾಗ ಪ್ರಾಪಂಚಿಕ ಆಸ್ತಿಪಾಸ್ತಿಗಳನ್ನು ಪ್ರತಿಷ್ಠಿಸುವ ವಿಷಯವು ಕಷ್ಟವಾದದ್ದಾಗಿರಲಿಲ್ಲ. ಇಂದು ಅನೇಕರು ಜಿಪುಣರೂ, ಆಶೆಬುರುಕರೂ ಆಗಿರುವದಕ್ಕೆ ಕಾರಣವು ಅವರು ಕ್ರಿಸ್ತನ ಕಾರಣಕ್ಕಾಗಿ ಸಂಪೂರ್ಣವಾಗಿ ತಮ್ಮನ್ನು ಎಂದೂ ಕೊಡದೇ ಇರುವಂಥದ್ದಾಗಿದೆ. ಮಾರ್ಪಡುವಿಕೆಯು ಸಮಯವನ್ನು, ತಲಾಂತುಗಳನ್ನು, ಸ್ವಂತವನ್ನು ಮತ್ತು ಆಸ್ತಿಗಳನ್ನು ದೇವರಿಗೆ ಸಮರ್ಪಿಸುವದನ್ನು ಒಳಗೊಂಡಿರುವದನ್ನು ನಾವು ಕಲಿಯುವ ಅವಶ್ಯಕತೆಯಿದೆ.

## ಅವರಿಗೆ ಉದಾರತೆಯ ಹಿನ್ನೆಲೆಯಿತ್ತು

ಆದಿ ಕ್ರೈಸ್ತರು ಉದಾರತೆಗೆ ಬಲವು ಇದ್ದ ಸಮಾಜದಿಂದ ಬಂದವರಾಗಿದ್ದರು. ಯೆರೂಸಲೇಮ ಸಭೆಯು ಉದಾರತೆಯುಳ್ಳ ಇತಿಹಾಸದೊಂದಿಗಿದ್ದ ಯೆಹೂದ್ಯರಿಂದ ರಚಿಸಲ್ಪಟ್ಟಿತ್ತು. ಇಸ್ರಾಯೇಲು ದೇವ ದರ್ಶನ ಗುಡಾರಕ್ಕಾಗಿ ಕೊಟ್ಟ ಕಾಣಿಕೆಗಳನ್ನು ಮತ್ತು ಅದರ ಪ್ರತಿಷ್ಠೆಯ ಸಮಯದಲ್ಲಿ ಅವರು ಕೊಟ್ಟ ಅರ್ಪಣೆಗಳನ್ನು ಜ್ಞಾಪಿಸಿಕೊಳ್ಳಿರಿ. ದೇವಾಲಯಕ್ಕಾಗಿ ದಾವೀದನ ಕಾಣಿಕೆಗಳನ್ನು, ದೇವಾಲಯದ ಜೀರ್ಣೋದ್ಧಾರಕ್ಕಾಗಿ ತಂದ ಕಾಣಿಕೆಗಳನ್ನು ಹಾಗೂ ದೇವಾಲಯವನ್ನು ಪುನಃ ಕಟ್ಟುವದಕ್ಕಾಗಿ ತಂದ ಕಾಣಿಕೆ ಗಳನ್ನು ಯೋಚಿಸಿರಿ, ಹಳೇ ಒಡಂಬಡಿಕೆಯ ಉದಾರತೆಯು ನಮ್ಮಲ್ಲಿ ಅನೇಕರನ್ನು ನಾಚಿಕೆ ಪಡಿಸುತ್ತದೆ.

ಯೆಹೂದಿ ಧರ್ಮದ ಯೆಹೂದ್ಯರ ದಶಮಾಂಶ, ಅರ್ಪಣೆಗಳು, ಕಾಣಿಕೆಗಳು ಹಾಗೂ ಯಜ್ಞೆಗಳು ಬಹಳ ಪ್ರಸಿದ್ಧವಾಗಿವೆ. ಒಟ್ಟು ಕೊಡುಗೆಗಳು ಅವರ ಆದಾಯದ ಗಮನಾರ್ಹವಾದ ಶತ ಪ್ರಮಾಣಗಳಲ್ಲಿದ್ದವು. ಅವರು ಕ್ರೈಸ್ತತ್ವಕ್ಕೆ ಮಾರ್ಪಾಟು ಹೊಂದಿದಾಗ ಉದಾರವಾಗಿ ಕೊಡುವುದು ಅವರಿಗೆ ಸ್ವಾಭಾವಿಕವಾದದ್ದಾಗಿತ್ತು. ಕ್ರಿಸ್ತನಡಿಯಲ್ಲಿ ಅವರು ಎಷ್ಟು ಕೊಡಬೇಕೆಂಬುದನ್ನು ತೀರ್ಮಾನಿಸಲು ಅವರು ಸ್ವತಂತ್ರರಾಗಿದ್ದರು: ಆದರೆ ಅವರು ಆ ಸ್ವತಂತ್ರ್ಯವನ್ನು ದುರಾಶೆಯ ಹೊಂದಿಕೆಗಾಗಿ ಉಪಯೋಗಿಸಲಿಲ್ಲ. ಅವರಿಗಿದ್ದ ಕೊಡುವದರ ರೂಢಿಗಿಂತ ಕಡಿಮೆಯಾದದ್ದನ್ನು ಅವರು ಕೊಟ್ಟರೋ?

ಈ ವಿಷಯದ ಮೇಲೆ ಹೆಚ್ಚು ಬೋಧನೆಯ ಅಗತ್ಯತೆಯಿದೆ. ಸಭೆಯಲ್ಲಿ ಒತ್ತಿ ಹೇಳ ಲ್ಪಡುವ ಅನೇಕ ವಿಷಯಗಳಿಗಿಂತ ಹೆಚ್ಚಾಗಿ ಹೇಳಲು ಬೈಬಲಿನಲ್ಲಿರುತ್ತದೆ. ಸತ್ಯವನ್ನು ಸರಳವಾಗಿ, ಬಲವಾಗಿ ಬೋಧಿಸದಿರುವುದು ಕ್ರೈಸ್ತ ಉದಾರತೆಗೆ ಒಳ್ಳೇ ಹಿನ್ನೆಲೆಯನ್ನು ಒದಗಿಸಿ ಕೊಡುವದಿಲ್ಲ.

## ಮನೆವಾರ್ತೆಯ ತತ್ವವನ್ನು ಅವರು ಗುರುತಿಸಿದ್ದರು

ಪ್ರಥಮ ಶತಮಾನದ ಕ್ರೈಸ್ತರು ಮನೆವಾರ್ತೆಯ ತತ್ವವನ್ನು ಗುರುತಿಸಿಕೊಂಡಿದ್ದರು. ತಮ್ಮ ಸ್ವಾಸ್ತ್ಯವು ತಮ್ಮ ಸ್ವಂತದ್ದಲ್ಲವೆಂದೂ ಇನ್ನೊಬ್ಬಾತನ ಆಸ್ತಿಯ ಜೋಪಾಸನೆ ಮಾಡುವ ಮನೆವಾರ್ತೆಯವರು ತಾವಾಗಿದ್ದೇವೆ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ಅದರ ವ್ಯವಹಾರ ಹೇಗೆ ಮಾಡಿದೆವೆಂಬುದರ ಲೆಕ್ಕಕೊಡುಬೇಕೆಂದು ಅವರು ತಿಳಿದಿದ್ದರು. ಆದುದರಿಂದ ಅವರು ಅದನ್ನು ಉಪಯೋಗಿಸುವದರ ಬಗ್ಗೆ ಜಾಗರೂಕರಾಗಿರಲು ಬಯಸಿದರು.

ಬೈಬಲಿನ ಅನೇಕ ವಾಕ್ಯಗಳು ದೈವಿಕ ಒಡತನದ ಬಗ್ಗೆ ಬೋಧಿಸುತ್ತವೆ. ಉದಾಹರಣೆಯಾಗಿ ವಿಮೋಚನಕಾಂಡ 19:5, "ಭೂಲೋಕವೆಲ್ಲಾ ನನ್ನದೇ" ಎಂದು ಹೇಳುತ್ತದೆ. (ಇತರ ವಾಕ್ಯಗಳು ಧರ್ಮೋಪದೇಶಕಾಂಡ 10:14; ಕೀರ್ತನೆ 24:1; 1 ಕೊರಿಂಥ 10:26.) ಹೀಗೆ, ಮಾನವ ಮನೆವಾರ್ತೆಯು ಬೋಧಿಸಲ್ಪಟ್ಟಿದೆ. ನಾವು "ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆಯವರಾಗಿರಬೇಕು" (1 ಪೇತ್ರ 4:10). ನಮ್ಮ ದೇಹಗಳು ನಮ್ಮವುಗಳಲ್ಲ ಎಂದು ಪೌಲನು ಒತ್ತಿಹೇಳಿದನು (1 ಕೊರಿಂಥ 6:19). ಇನ್ನೊಬ್ಬರಿಗೆ ಒಳಪಟ್ಟದರ ಜವಾಬ್ದಾರಿಕೆಯನ್ನು ಮಾತ್ರ ನಾವು ತೆಗೆದುಕೊಂಡಿದ್ದೇವೆಂದು ಅರಿತುಕೊಳ್ಳುವಾಗ, ಅದನ್ನು ಉಪಯೋಗಿಸುವದರಲ್ಲಿ ನಾವು ಹೆಚ್ಚು ಜಾಗರೂಕರಾಗಿರುವೆವು. ಅದನ್ನು ಉಪಯೋಗಿಸದ್ದರ ಬಗ್ಗೆ ನವು ಉತ್ತರ ಕೊಡಬೇಕಾಗುವುದು.

## ದೇವರ ಪ್ರೀತಿಗೆ ಪ್ರತ್ಯುತ್ತರವಾಗಿ ಅವರು ಕೊಟ್ಟರು

ಆದಿ ಶಿಷ್ಯರು ಉದಾರವಾಗಿ ಕೊಟ್ಟರು ಯಾಕಂದರೆ ಅವರು ಕ್ರೂಜೆಯ ನೆರಳಿನಲ್ಲಿ ಜೀವಿಸಿದರು. ಕೆಲವರು ಕಲ್ವಾರಿಯ ಘಟನೆಗಳಿಗೆ ಪ್ರತ್ಯಕ್ಷ ಸಾಕ್ಷಿಗಳಾಗಿದ್ದರು. ಅತ್ಯುನ್ನತವಾದ ದೇವರ ಪ್ರೀತಿಯನ್ನು, ಉದಾರತೆಯನ್ನು ಅವರು ನೋಡಿದ್ದರು. ದೇವರು "ಎಷ್ಟೋ ಪ್ರೀತಿಯನ್ನು ಮಾಡಿದ್ದನ್ನು" ಅವರು ಅರ್ಥ ಮಾಡಿಕೊಂಡಿದ್ದರು. ಅವರಿಗೆ ಅದರ ರುಜುವಾತು ಇತ್ತು. ಯಾಕಂದರೆ ಹೇಗೆ "ಆತನು ಕೊಟ್ಟನು" ಎಂಬುದನ್ನು ಅವರು ನೋಡಿದ್ದರು (ಯೋಹಾನ 3:16 ನೋಡಿರಿ). ಅವರನ್ನು "ಆತನು ಮೊದಲು ಪ್ರೀತಿಸಿದ್ದರಿಂದ" ಅವರು ದೇವರನ್ನು ಪ್ರೀತಿಸಿದರು (1 ಯೋಹಾನ 4:19), ಆದುದರಿಂದ ಕೊಡಲು ಅವರಿಗೆ ಕಠಿಣವಾದದ್ದಾಗಿರಲಿಲ್ಲ.

## ಮುಕ್ತಾಯ

ಕಲ್ವಾರಿಯಿಂದ ನಾವು ಹಲವಾರು ಶತಮಾನಗಳಿಂದ ದೂರದಲ್ಲಿದ್ದೇವೆ. ಆದರೆ ಅಲ್ಲಿ ನಡೆದದ್ದನ್ನು ಸಮಯದಿಂದ ಅಳಿಸಿ ಹಾಕಲಿಕ್ಕಾಗುವದಿಲ್ಲ. ಇಂದು ಕೊಡುವದರಲ್ಲಿಯ ಉದಾರತೆಯ ಕೊರತೆಗೆ ದೊಡ್ಡ ಕಾರಣವು ಶಿಲುಬೆಯ ಅರ್ಥವನ್ನು ಮೆಚ್ಚಿಕೊಳ್ಳದಿರವುದಾಗಿದೆ. ದೇವರು ನಮ್ಮನ್ನು "ಎಷ್ಟೋ ಪ್ರೀತಿ ಮಾಡಿ" ನಮಗಾಗಿ ತನ್ನ ಕುಮಾರನನ್ನು ಕೊಟ್ಟನು (ಯೋಹಾನ 3:16; ಎಫೆಸ 5:25 ನೋಡಿರಿ). ಇದನ್ನು ಜ್ಞಾಪಿಸಿಕೊಳ್ಳುವುದು ದೇವರ ಕಡೆಗೆ ನಮ್ಮ ಹೃದಯಗಳಲ್ಲಿ ಪ್ರೀತಿಯನ್ನು ಹುಟ್ಟಿಸುವುದು. ಈ ಪ್ರೀತಿಯು ನಮಗಾಗಿ ದೇವರು ಪ್ರೀತಿ ಮಾಡಿದಂತೆಯೇ ಉದಾರತೆಯಲ್ಲಿ ತನ್ನನ್ನು ಪ್ರಕಟಿಸಿಕೊಳ್ಳುವುದು.



© 2009 Truth for Today